<u>ದಿನಾಂಕಃ **14-11-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ **12** ನೇ ಪ್ರತಿವಾದಿ ಪರ ಶ್ರೀ ಜಿ ಎಂ ವಿ ವಕೀಲರಿಂದಃ</u>

ನಾನು ಹಾಜರುಪಡಿಸಿರುವ ನನ್ನ ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ ನಮ್ಮ ವಂಶವೃಕ್ಷವನ್ನು ಸಭೀತುಪಡಿಸುವ ಸಂಬಂಧ ಹಾಜರುಪಡಿಸಿದ ದಾಖಲೆಗಳು ಇರುತ್ತದೆ ಎಂದರೆ ಸರಿ. ನಮ್ಮ ತಾಯಿ ತೀರಿಕೊಳ್ಳುವವರೆಗೂ ನನ್ನ ಜೊತೆ ವಾಸ ಇದ್ದರು. ನಮ್ಮ ಮನೆ ಓಲ್ಡ್ ಬಾರ್ ಲೈನ್ ರೋಡ್‌ನಲ್ಲಿ ಇತ್ತು. ನಾನು 1997 ರಲ್ಲಿ ನಮ್ಮ ವಾಸದ ಮನೆಯನ್ನು ಬದಲಾಯಿಸಿರುತ್ತೇನೆ. ನಿಪಿ-31 ರಲ್ಲಿ ಕಾಣುವ ಭಾವಚಿತ್ರ ನಮ್ಮ ತಾಯಿಯದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-31 ರಲ್ಲಿ ವಿಳಾಸ ವೃದ್ಧಶ್ರಮಕ್ಕೆ ಸಂಬಂಧಿಸಿದ ವಿಳಾಸ ಇರುತ್ತದೆ ಎಂದರೆ ಸಾಕ್ಷಿ ಅದು ಲೇಡಿಸ್ ಹಾಸ್ಟೆಲ್ ಇದ್ದು ಚುನಾವಣೆ ಭೂತ್ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಚುನಾವಣೆ ಭೂತ್ ಅನ್ನು ಗುರುತಿನ ಚೀಟಿಯಲ್ಲಿ ನಮೂದು ಮಾಡುವುದಿಲ್ಲ ಎಂದರೆ ಸರಿಯಲ್ಲ. ನಿಪಿ- 31 ರಲ್ಲಿ ನಮೂಾದಿಸಿದ ಜಾಗ ರಂಗಪ್ಪ ಮೂಲ ಹಾಸ್ಟೆಲ್ ಇರುತ್ತದೆ ಎಂದರೆ ಸರಿ.

2. ನಿಪಿ-32 ರಲ್ಲಿ ನಾವು ವಾಸ ಇದ್ದ ಹಳೇ ಮನೆಯ ವಿಳಾಸ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ- 32 ರಲ್ಲಿ ರಂಗಯ್ಯ ಬಾಯರ್ ಇವರ ಮಗಳು ಸಾವಿತ್ರಮ್ಮ ಎಂದು ನಮೂದು ಇರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು ಗಂಡನ ಹೆಸರು ಮಾತ್ರ ಇರುತ್ತದೆ ಎಂದು ಉತ್ತರಿಸುತ್ತಾರೆ. ನಿಪಿ- 31 ರಲ್ಲಿ ಸಾವಿತ್ರಮ್ಮ ಇವರು ಹೆಸರಿನ ಮುಂದೆ ಯಾವುದೇ ಇನಿಷಿಯಲ್ ಇರುವುದಿಲ್ಲ ಎಂದರೆ ಸರಿ. ನಿಪಿ-32 ರಲ್ಲಿ ಮಾರಾಟ ಮಾಡಿದ ಆಸ್ತಿ ನಮ್ಮ ತಂದೆಯ ತಂದೆ ಆಸ್ತಿ ಇರುತ್ತದೆ. ನಮ್ಮ ತಂದೆ ದಿಃ ಎಂ ರಾಮಚಂದ್ರ ಅಡಿಗ ಎಂದು ತೋರಿಸುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಕ್ರಯ ಪತ್ರದಲ್ಲಿ ತಂದೆ ತೀರಿಕೊಂಡಾಗ ಅವರ ಮಕ್ಕಳ ಹೆಸರನ್ನು ಪೌತಿ ಖಾತೆಯಲ್ಲಿ ಬರೆಯುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-32 ರಲ್ಲಿ ನಮೂದಿಸಿದ ಆಸ್ತಿಯ ಮೇಲೆ ಶಿವಮೊಗ್ಗ ನ್ಯಾಯಾಲಯ ದಲ್ಲಿ ದಾವೆ ಇರುತ್ತದೆ. ಸದರಿ ದಾವೆ ಪಾಲಿನ ಸಂಬಂಧ ಹೂಡಲಾಗಿತ್ತು. ಸದರಿ ದಾವೆಯ ನಂಬರ್ ಕ್ರಯ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ ಸಾಕ್ಷಿ ಮುಂದುವರೆದು ಆ ಕೇಸು ಮುಗಿದು ಎಷ್ಟೋ ವರ್ಷಗಳ ನಂತರ ಮಾರಾಟ

ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ನಾನು ನಿಪಿ- 29 ರಿಂದ 32 ದಾಖಲೆಗಳನ್ನು ದುರುದ್ದೇಶದಿಂದ ಸೃಷ್ಟಿಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ **10** ರ ಪರ ವಕೀಲರು ಸಮಯ ಕೋರಿದ್ದು**,** ಸಮಯ ನೀಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ**.**ರಾ**.**ಪುರ**,**
ಸಂಚಾರಿ ನ್ಯಾಯಾಲಯ**,** ಕೊಪ್ಪ**.**

ಸಾಕ್ಷಿದಾರರ ಸಹಿಃ